ದಿನಾಂಕಃ 13-12-2019 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

ಮುಂದುವರೆದ_ಪಾಟಿ_ಸವಾಲುಃ- ಪ್ರತಿವಾದಿ 1 ರಿಂದ 3 ಪರ ಶ್ರೀ ಎಸಎಕೆ ವಕೀಲರಿಂದ

ನನ್ನ ಲಿಖಿತಪತ್ರ ಬರೆಸಿಹಾಕಲು ನಮ್ಮ ವಕೀಲರಿಗೆ ನಾನೇ ಮಾಹಿತಿ ನೀಡಿರುವೆನು ನನ್ನ ಲಿಖಿತಪತ್ರದಲ್ಲಿ ಬ್ಯಾಂಕನಿಂದ ಸಾಲ ಮಾಡಿ ಈ ಜಮೀನು ಖರೀದಿ ಹಿಡಿದಿರುವ ಬಗ್ಗೆ ಬರೆಸಿ ಹಾಕಿರುವುದಿಲ್ಲ. ನಾನು ಜಮೀನನ್ನು ಖರೀದಿ ಮಾಡುವ ಸಲುವಾಗಿ ಬ್ಯಾಂಕಗೆ ಸಾಲದ ಅರ್ಜಿಗೆ ಸಲ್ಲಿಸಿರುವುದಿಲ್ಲ. ನಾನು ನನ್ನ ನೌಕರಿಯ ಮೇಲೆ ಸಾಲ ಪಡೆದುಕೊಂಡಿರುವೆನು. ನಾನು ಬ್ಯಾಂಕಗೆ ಸಾಲ ಪಡೆಯುವ ಸಲುವಾಗಿ ಅರ್ಜಿ ಸಲ್ಲಿಸಿದಾಗ ನನಗೆ ವೈಯಕ್ತಿಕ ಕಾರಣದಿಂದಾಗಿ ಹಣದ ಅವಶ್ಯಕತೆ ಇರುವುದಾಗಿ ಎಂದು ಸಾಲದ ಅರ್ಜಿ ಸಲ್ಲಿಸಿರುವೆನು. ನನ್ನ ಲಿಖಿತಪತ್ರದಲ್ಲಿ ನಾನು ಬ್ಯಾಂಕನಿಂದ ವೈಯಕ್ತಿಕ ಕಾರಣಕ್ಕಾಗಿ ಸಾಲ ಪಡೆದುಕೊಂಡಿರುವ ಬಗ್ಗೆ ಹೇಳಿ ಬರೆಸಿರುವುದಿಲ್ಲ. ನಾನು ಈ ಜಮೀನನ್ನು ಬ್ಯಾಂಕನಿಂದ ಸಾಲ ಮಾಡಿ ಖರೀದಿ ಮಾಡಿರುವುದಿಲ್ಲ ನನ್ನ ತಂದೆ ನನ್ನ ಹೆಸರಿನಲ್ಲಿ ಖರೀದಿ ಮಾಡಿರುವರು ಅಂದರೆ ಸರಿಯಲ್ಲ. ನನ್ನ ಲಿಖಿತಪತ್ರದಲ್ಲಿ ನಾನು ಸಾಲ ಪಡೆದುಕೊಂಡು ಜಮೀನಿಗೆ ಸಂಬಂಧಪಟ್ಟಂತೆ ಸಂಚಕಾರಪತ್ರ ಬರೆದುಕೊಂಡಿರುವ ಬಗ್ಗೆ ನಂತರ ಉಳಿದ ಬಾಕಿ ಹಣವನ್ನು ನೀಡಿ ಖರೀದಿ ಪತ್ರವನ್ನು ನೊಂದಣಿ ಮಾಡಿಸಿಕೊಂಡಿರುವ ಬಗ್ಗೆ ಹೇಳಿ ಬರೆಸಿರುವುದಿಲ್ಲ.

ನನ್ನ ತಕರಾರಿನಲ್ಲಿ ಪ್ರತಿವಾದಿ 2 ವಿನ ವಿವಾಹ ಚನ್ನವೀರಯ್ಯನ ಜೊತೆ ಈ ಮೊದಲೆ ಆದ ಬಗ್ಗೆ ನಾನು ಹೇಳಿ ಬರೆಸಿರುವುದಿಲ್ಲ ಅಂದರೆ ಸರಿ. ಈ ಸಂಗತಿಯನ್ನು ನಾನು ಸುಳ್ಳು ಹೇಳುತ್ತಿದ್ದೆನೆ ಅಂದರೆ ಸರಿಯಲ್ಲ. ನಾನು ಖೊಟ್ಟಿ ದಾಖಲೆಯನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೆನೆಅಂದರೆ ಸರಿಯಲ್ಲ. ನಾನು ನನ್ನ ದುಡಿಮೆಯ ಉಳಿತಾಯದ ಹಣದಿಂದ ಹಾಗೂ ಬ್ಯಾಂಕನಿಂದ ಸಾಲ ಮಾಡಿ ಯಾವುದೇ ಜಮೀನನ್ನು ಖರೀದಿ ಮಾಡಿರುವುದಿಲ್ಲ

ಅಂದರೆ ಸರಿಯಲ್ಲ.  ನಾನು ಸುಳ್ಳು ಲಿಖಿತಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೆನೆ ಅಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೆ.ಕೆ.ಸರಿ.ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಮ್ ಎಫ್ ಸಿ, ಶಿಗ್ಗಾಂವ.
(ಸ್ಥಳಃ ಸವಣೂರ).